## ಎಂವಿಸಿ ಸಂಖ್ಯೆಃ 122/2024 ಆರ್.ಡಬ್ಲೂಃ 1

**ದಿನಾಂಕಃ 13-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಖ್ಯ ವಿಚಾರಣೆಃ 3 ನೇ ಎದ್ರುದಾರರ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಬಾಬ್ತು ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಹೇಳಿ ಬರೆಸಿರುವ ಎಲ್ಲ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿ ಬರೆದಿರುವ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಸಾಕ್ಷಿದಾರರು ದಾಖಲಾತಿಗಳನ್ನು ನೋಡಿ ಗುರುತಿಸಿರುತ್ತಾರೆ.

1. ವಿಮಾ ಪಾಲಿಸಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಆರ್-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದ**

ನಾನು ನನ್ನ ಸಾಕ್ಷ್ಯವನ್ನು ಪೊಲೀಸ್ ದಾಖಲೆಗಳ ಆಧಾರದ ಮೇರೆಗೆ ನುಡಿಯುತ್ತಿದ್ದೇನೆ. ಸದ್ರಿ ಟ್ರೈಲರ್ ಗೆ ನಮ್ಮ ಕಂಪನಿಯ ವಿಮೆ ಇತ್ತು ಎಂದರೆ ನಿಜ. ಸದ್ರಿ ಚಾಲಕನಿಗೆ ಸೂಕ್ತ ಡ್ರೈವಿಂಗ್ ಲೈಸನ್ಸ ಇತ್ತು ಎಂದರೆ ಸರಿ ಅಲ್ಲ. ಅಪಘಾತ ಸಮಯದಲ್ಲಿ ಮೃತಪಟ್ಟ ವ್ಯಕ್ತಿಗೆ ಪರಿಹಾರ ಕೊಡಲು ನಮ್ಮ ವಿಮಾ ಕಂಪನಿಯೇ ಜವಾಬ್ದಾರರು ಎಂದರೆ ಸರಿ ಅಲ್ಲ. ಪರಿಹಾರ ಕೊಡುವ ಬಾಧ್ಯಸ್ಥಿಕೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಸಂಗತಿಗಳನ್ನು ಮುಂದೆ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಅಪಘಾತಪಡಿಸಿದ ಇಂಜಿನ್‌ಗೆ ವಿಮೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಅಪಘಾತ ಸಮಯದಲ್ಲಿ ನಮ್ಮ ವಿಮೆ ಚಾಲ್ತಿಯಲ್ಲಿದ್ದರಿಂದ ಮತ್ತು ಸದ್ರಿ ವಾಹನ ಚಾಲಕನಿಗೆ ಚಾಲನಾ ಪ್ರಮಾಣಪತ್ರ ಇದ್ದಿದ್ದರಿಂದ ಪರಿಹಾರ ಕೊಡಲು ನಾವೇ ಬಾಧ್ಯಸ್ಥರು ಎಂದರೆ ಸರಿ ಅಲ್ಲ.

**ಪಾಟೀ ಸವಾಲುಃ**

1 ಮತ್ತು 2 ನೇ ಎದುರುದಾರರ ಪರ ವಕೀಲರನ್ನು ಕೂಗಿ ಕರೆಸಲಾಗಿ, ಗೈರು ಹಾಜರು ಇದ್ದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

**(ಓ.ಹೇ.ಕೇ.ಸ.)**

**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ರಾಣೆಬೆನ್ನೂರ.**

ಸಾಕ್ಷಿದಾರರ ಸಹಿಃ